





ಬೇಕಾದಂತೆ ಫಿಟ್ ಆಗಿದ್ದು ಆಯಾಯ ವಿನ್ಯಾಸಕ್ಕೆ ಅನುಗುಣವಾಗಿ ಹೊಂದಿಕೊಳ್ಳುತ್ತದೆ. ಗಾತ್ರ ಸಣ್ಣದಾಗಿರುವುದು ಚಿತ್ರ ವಿನ್ಯಾಸಗೊಳಿಸುವಾಗ ಸ್ಪಷ್ಟವಾದ ಆಕೃತಿ ಹೊರಹೊಮ್ಮುತ್ತದೆ.

## ಜುಮ್ಕಾ

ಈ ಆಭರಣಗಳಲ್ಲಿ ಮುಖ್ಯ ಆಕರ್ಷಣೆ ಇಳಿಬಿಟ್ಟ ಮುತ್ತಿನ ಗೊಂಚಲು ಆಹಾ.. ಅದರ ನೋಟವೇ ಸೊಗಸು. ಏಕೆಂದರೆ ಒಂದು ಮುತ್ತಿನಿಂದ ಇನ್ನೊಂದು ಮುತ್ತಿನ ನಡುವೆ ಅಂತರ ಬಹಳ ಕಡಿಮೆ ಇರುತ್ತದೆ. ಇದರಿಂದ ಹತ್ತಿರ ಹತ್ತಿರವಾಗಿ ಮುತ್ತುಗಳು ಜೋಡಿಕೊಂಡಿದ್ದು ಚೂಪಾದ ಕೆಳಗಿನ ಭಾಗ ಅದ್ಭುತ ನೋಟವನ್ನು, ಸೌಂದರ್ಯವನ್ನು ಕೊಡುತ್ತದೆ, ನೀಳವಾಗಿ ಇರುವವರಿಗೂ, ಗುಂಡು ಗುಂಡಾದ ಮುಖ ಇರುವವರಿಗೂ ಚಂದ ಕಾಣುತ್ತದೆ. ಈ ಜುಮ್ಕಿಯಲ್ಲಿ ಮುತ್ತು ಭಾರವಾಗುವುದಿಲ್ಲ. ಏಕೆಂದರೆ ರೈಸ್ ಪರ್ಲ್ ಹಗುರವಾಗಿರುತ್ತದೆ.

## ಹಾರಮ್

ರೈಸ್ ಪರ್ಲ್ ಅಕ್ಕಿಯ ತರಹ ಶೇಪ್ ಮಾಡಲು ನುರಿತ ತಜ್ಞರು ಬಹಳ ಜಾಗರೂಕತೆಯಿಂದ ವಿನ್ಯಾಸ, ಶೇಪ್ ನೀಡುತ್ತಾರೆ. ಸೂಕ್ಷ್ಮವಾದ ಕೆಲಸ ಇದು. ಆದರೆ ಈ ರೈಸ್ ಪರ್ಲ್ ಒಂದಕ್ಕೊಂದು ಹೊಂದಿಕೊಂಡು ಉದ್ದವಾದ ಹಾರಮ್ ತಯಾರಾದಾಗ ಉಳಿದ ಆಭರಣಗಳಿಗಿಂತ ವಿಭಿನ್ನವಾಗಿ ಕಾಣುತ್ತದೆ. ಇದು ಹೇರಳವಾಗಿ ಬಳಕೆಯಲ್ಲಿಲ್ಲದ ಕಾರಣ ಇಷ್ಟೇ ನುರಿತ ತಜ್ಞರಿಂದ ಇಂತಹ ಆಭರಣ ತಯಾರಿಸಬೇಕಾಗುತ್ತದೆ. ಹಾಗಾಗಿ ನಾವು ತೊಟ್ಟುಕೊಂಡು ಇನ್ನೊಬ್ಬರಿಗಿಂತ ವಿಭಿನ್ನವಾಗಿ ಬಹಳ ಸುಂದರವಾಗಿರಬೇಕು ಎಂದು ಬಯಸುವವರು ಈ ಆಭರಣ ದುಬಾರಿಯಾದರೂ ಖರೀದಿಸಬಹುದು.

## ಬ್ರೇಸ್ಲೆಟ್, ಮುಂಗೈ ಸರಪಳಿ

ಹಾರಮ್‌ಗಳನ್ನು ಹುಕ್‌ಗಳಲ್ಲಿ ಬಂಧಿಸಿದ್ದಲ್ಲಿ ಅದನ್ನು ಬೇರ್ಪಡಿಸಿ ಕೈಗೆ ಸಣ್ಣ ನೆಕ್ಲೇಸ್ ಆಗಿ ಕೂಡ ಬಳಸಬಹುದು. ಸಾಂಪ್ರದಾಯಿಕ ಕಾರ್ಯಕ್ರಮ, ಸಭಾ ಕಾರ್ಯಕ್ರಮ, ಮದುವೆಗಳಿಗೆ ಹೋಗುವಾಗ ಧರಿಸಲು ಬಹಳ ಸೊಗಸಾಗಿರುತ್ತದೆ. ರೈಸ್ ಪರ್ಲ್ ಚಿಕ್ಕದಾಗಿ ಚೊಕ್ಕದಾಗಿರುವುದರಿಂದ ಬಹಳ ಇಷ್ಟಪಡುತ್ತಾರೆ. ಕಣ್ಣಿಗೆ ಸೊಗಸಾಗಿ ಕಾಣುತ್ತದೆ. ಒಪ್ಪ ಓರಣವಾಗಿ ನಿಲ್ಲುತ್ತದೆ.

ಲೈಟ್‌ವೈಟ್ ಆಗಿರುತ್ತದೆ. ಡೈಪೀಸ್ ಅಳವಡಿಸಿದ ವಿನ್ಯಾಸದ ಪೆಂಡೆಂಟ್‌ಗಳ ಜೊತೆ ರೈಸ್ ಪರ್ಲ್ ಸರಗಳ ವಿನ್ಯಾಸ ಬಹಳ ಸುಂದರವಾಗಿ ಹೊಂದಿಕೊಳ್ಳುತ್ತದೆ. ಮುತ್ತುಗಳಲ್ಲಿ ಬಿಳಿ, ಕ್ರೀಮ್ ಬಣ್ಣದ ಮುತ್ತುಗಳು ಬಹಳ ಪ್ರಸಿದ್ಧ. ಕಾಟನ್ ಇತರ ಬಟ್ಟೆಗಳಿಗೆ ಬಿಳಿ ಮುತ್ತು ಚಂದ. ಕ್ರೀಮ್ ಬಣ್ಣದ ಮುತ್ತುಗಳು, ಗ್ರಾಂಡ್‌ಲುಕ್ ಕೊಟ್ಟು ರೇಷ್ಮೆ ಸೀರೆ, ದಾವಣಿ, ಲೆಹೆಂಗಾಗಳಿಗೆ ಅದ್ಭುತ ನೋಟ ಕೊಡುತ್ತದೆ.

## ಮುತ್ತಿನೊಂದಿಗೆ ಕಾಂಬಿನೇಶನ್ ಹೇಗೆ?

ಮುತ್ತು ಎಲ್ಲ ಒಡವೆಗಳೊಂದಿಗೆ ಹೊಂದಿಕೊಳ್ಳುತ್ತದೆ. ಆ್ಯಂಟಿಕ್ ಪೆಂಡೆಂಟ್, ರೂಬಿ ಹರಳುಗಳು, ಜೇಡ್ (ಪಚ್ಚೆ) ಮಣಿಗಳು ಮುತ್ತಿನೊಂದಿಗೆ ಬೆರೆಯುತ್ತವೆ. ಹಾಲಿನಲ್ಲಿ ಸಕ್ಕರೆ ಬೆರೆತಂತೆ. ಜುಮ್ಕಾದಲ್ಲಿ ಚಿನ್ನದ ಗುಂಡುಗಳ ಜೊತೆಗೆ ಮುತ್ತನ್ನು ಅಳವಡಿಸಬಹುದು. ಹ್ಯಾಂಗಿಂಗ್‌ಗಲ್ಲದೆ ರೈಸ್ ಶೇಪ್ ಕಣ್ಣು, ಇತ್ಯಾದಿಗಳನ್ನು ವಿನ್ಯಾಸಗೊಳಿಸಲು ಹೊಂದುತ್ತದೆ. ಚೋಕರ್‌ಗಳಲ್ಲೂ ರೈಸ್ ಪರ್ಲ್ ಅತ್ಯಾಕರ್ಷಕವಾಗಿ ಕಾಣುತ್ತದೆ.

ಗೊಂಚಲು ಗೊಂಚಲುಗಳಾಗಿ ವಿನ್ಯಾಸಗೊಳಿಸಿ ಸರ ತಯಾರಿಸಬಹುದು. ಇದು ಹೊಸ ಟ್ರೆಂಡ್ ಕೂಡ ಆಗಿದೆ. ಇತ್ತೀಚಿನ ದಿನಗಳಲ್ಲಿ ಹಳೆಯ ಮೂಗುತಿಗಳಲ್ಲಿ ಇರುವಂತೆ ಮುತ್ತಿನ ಗೊಂಚಲು ಧರಿಸುವುದು ಟ್ರೆಂಡ್. ಮುತ್ತುಗಳನ್ನು ನೂಲಿನಲ್ಲೂ ಪೋಣಿಸಿ ಸರಳ ಸುಂದರವಾಗಿ ಧರಿಸಬಹುದು. ಅಲ್ಲಲ್ಲಿ ಕೆಲವು ಚಿನ್ನದ ಗುಂಡುಗಳ ಅದೇ ರೀತಿ ಕೆಳಭಾಗದಲ್ಲಿ ಒಂದು ಪೆಂಡೆಂಟ್ ಅಳವಡಿಸಿಕೊಂಡು ಧರಿಸಬಹುದು. ■